## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

**ಸಿಸಿ ನಂ ಃ1846/2022**

**ಸಿಡಬ್ಲು ಃ 1**

**ಪಿಡಬ್ಲು ಃ 1**

**ಹೆಸರು** ಃ ಮಲ್ಲಿಕಾರ್ಜುನ ಅಪ್ಪಾಸಾಹೇಬ ಪಾಟೀಲ

**ವಯಾ** ಃ 31 ವರ್ಷ

**ಉದ್ಯೋಗ** ಃ ಗ್ಯಾಸ ಅಂಗಡಿಯಲ್ಲಿ ಕೆಲಸ

**ವಾಸ** ಃ ಬೆಲ್ಲದ ಬಾಗೇವಾಡಿ ತಾಃ ಹುಕ್ಕೇರಿ

**(ದಿನಾಂಕಃ 28-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ ಃ ಸಸಅಃರವರಿಂದ ಸರಕಾರದ ಪರವಾಗಿ ಃ**

ನನ್ನ ತಮ್ಮ ಕಿರಣ ಅಪ್ಪಸಾಹೇಬ ಪಾಟೀಲ ಅವರು ಬೆಳಗಾಂ ಶುಗರ್ಸ ಫ್ಯಾಕ್ಟರಿಯಲ್ಲಿ ಲ್ಯಾಬ ಟೆಕ್ನಿಸಿಯನ್ ಆಗಿ ಕೆಲಸ ಮಾಡುತ್ತಿದ್ದರು. ಅವರು ಮತ್ತು ನನ್ನ ತಾಯಿ ಹುದಲಿಯಲ್ಲಿಯೇ ಇರುತ್ತಿದ್ದರು. ದಿಃ 08-05-2022ರಂದು ಸಂಜೆ 7-00 ಗಂಟೆಗೆ ನನ್ನ ತಮ್ಮ ಕಿರಣ ಒಬ್ಬರೆ ಮೋಟಾರ ಸೈಕಲನಲ್ಲಿ ಹುದಲಿಯ ಶುಗರ್ಸ ಫ್ಯಾಕ್ಟರಿಗೆ ಬೆಲ್ಲದ ಬಾಗೇವಾಡಿಯಿಂದ ಹೋಗುತ್ತಿದ್ದರು. ಶಿರಢಾನ ಕ್ರಾಸ ಬೆಲ್ಲದ ಬಾಗೇವಾಡಿ ರಸ್ತೆಯ ಮೇಲೆ ನನ್ನ ತಮ್ಮನ ಮೋಟಾರ ಸೈಕಲ ಅಪಘಾತ ಆಗಿದೆ ಎಂದು ಪೋನ ಮಾಡಿ ನನಗೆ ತಿಳಿಸಿದರು. ನಾನು ಮತ್ತು ನನ್ನ ಗೆಳೆಯರು ಹೋಗಿ ನೋಡಿದೆವು. ಅಲ್ಲಿ ಹೊಗಿ ನೋಡಿದಾಗ ಅಲ್ಲಿ ನನ್ನ ತಮ್ಮನ ಹೆಣ ಬಿದ್ದಿತ್ತು. ಅಲ್ಲಿ ನನ್ನ ತಮ್ಮನ ತಲೆಯ ಮೇಲೆ ಲಾರಿಯ ಚಕ್ರ ಹಾದಿದ್ದು ಆತ ಮೃತ ಪಟ್ಟಿದ್ದ. ಸದರಿ ಅಪಘಾತ ಆ ಟ್ರಕ ಚಾಲಕನ ನಿಲರ್ಕ್ಷತನದಿಂದ ಆಗಿದೆ ಎಂದು ಅಲ್ಲಿ ಇದ್ದಂತವರು ಹೇಳಿದರು ಅಲ್ಲಿ ನನ್ನ ತಮ್ಮನ ಹೆಲಮೆಟ ಮತ್ತು ಬೈಕ ಬಿದ್ದಿತ್ತು. ಸದರಿ ಬೈಕ ಹೊಂಡಾ ಶೈನ ಆಗಿತ್ತು. ಗಾಡಿಗೆ ಡ್ಯಾಮೇಜ ಆಗಿರಲಿಲ್ಲ. ನಂತರ ನನ್ನ ತಮ್ಮನ ಶವವನ್ನು ಹುಕ್ಕೇರಿ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬರಲಾಯಿತು. ನನ್ನ ತಮ್ಮನ ಶವ ಮತ್ತು ಮೋಟಾರ ಬೈಕ ರಸ್ತೆಯ ಎಡಬದಿಗೆ ಬಿದ್ದಿತ್ತು. ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿ ಟ್ರಕ ಇರಲಿಲ್ಲ ನಂತರ ಅದು ಕಬ್ಬೂರ ಪೊಲೀಸ ಠಾಣೆಗೆ ಹೋಗಿ ತರುಬಿದ್ದಾರೆ ಎಂದು ಗೊತ್ತಾಗಿತ್ತು. ನಂತರ ನಾನು ಪೋಲಿಸರಿಗೆ ದೂರು ಕೊಟ್ಟೆ. ದೂರನ್ನು ನನ್ನ ಗೆಳೆಯ ದೇವೆಂದ್ರ ನಂದಗಾಂವ ಬರೆದರು. ಸದರಿ ದೂರು ಈಗ ನೋಡುತ್ತಿದ್ದೇನೆ. ಸಾಕ್ಷಿ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ನಂತರ ಪೊಲೀಸರು ಸರಕಾರಿ ಆಸ್ಪತ್ರೆಗೆ

ಕರೆದುಕೊಂಡು ಹೋದರು ಅಲ್ಲಿ ನನ್ನ ತಮ್ಮನ ಶವದ ಪಂಚನಾಮೆ ಮಾಡಿದರು. ಅಲ್ಲಿ ನಾನು ಮತ್ತು ನನ್ನ ಸ್ನೇಹಿತರಾದ ಮಾರುತಿ ಗಲಾಟೆ ಮತ್ತು ಸೋಮಗೌಡಾ ಶರಹಟ್ಟಿ ಇದ್ದೇವು. ಅಲ್ಲಿ ನಮ್ಮ ಸಮಕ್ಷಮ ಶವದ ಪಂಚನಾಮೆ ಮಾರಡಿದರು ಶವದ ಪಂಚನಾಮೆ ನೋಡುತ್ತಿದ್ದೇನೆ ಅದನು ನಿಪಿ2 ಎ ಎಂದು ಗುರುತಿಲಸಲಾಯಿತು. ಅಲ್ಲಿ ತೆಗೆದ ಪೋಟೊವನ್ನು ನಿಪಿ-3 ಎಂದು ಗುರುತಿಸಲಾಯಿತು. ದೂರು ಕೊಟ್ಟ ಮರುದಿನ ಪೋಲಿಸರು ಅಪಘಾತ ಸ್ದಳಕ್ಕೆ ನಮ್ಮನ್ನು ಕರೆಸಿದರು. ಅಲ್ಲಿ ನಾನು ಮತ್ತು ನನ್ನ ಸ್ನೇಹಿತರಾದ ಪ್ರವೀಣ ತೇರದಾಳೆ ಮತ್ತು ಅರುಣಕತ್ತಿ ಇದ್ದೇವು. ನಮ್ಮ ಸಮಕ್ಷಮ ಅಲ್ಲಿ ಅಪಘಾತ ಸ್ದಳದ ಪಂಚನಾಮೆ ಮಾಡಿದರು ಅದನ್ನು ನಿಪಿ-4 ಎಂದು ಗುರುತಿಸಾಯಿತು. ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಅಲ್ಲಿ ಮಾಡಿದಂತಹ ನಕಾಶೆಯನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5ಎ ಎಂದು ಗುರುತಿಸಲಾಯಿತು.ನನ್ನ ತಮ್ಮನ ಶವ ಪಂಚನಾಮೆ ಮಾಡಿದ ಬಗ್ಗೆ ಅಲ್ಲಿ ತೆಗೆದ ಪೋಟೊವನ್ನು ನೋಡುತ್ತಿದ್ದೇನೆ ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಅಪಘಾತದಲ್ಲಿ ಭಾಗಿಯಾದ ಮೋಟಾರ ಸೈಕಲ್ಲನ್ನು ಪೋಲಿಸರು ನನ್ನ ಮತ್ತು ಚಾಸಾ-4 ಮತ್ತು 5 ಇವರ ಸಮಕ್ಷಮ ಪೊಲೀಸ ಠಾಣೆಯಲ್ಲಿ ಜಪ್ತಿ ಪಡಿಸಿಕೊಂಡರು. ಅಲ್ಲಿ ಒಂದು ಪಂಚನಾಮೆ ಮಾಡಿದರು ಸದರಿ ಪಂಚನಾಮೆಯನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7 ಎ ಎಂದು ಗುರುತಿಸಲಾಯಿತು. ಅಲ್ಲಿ ತೆಗೆದ ಪೊಟೋಗಳನ್ನು ಈಗ ನೋಡುತ್ತಿದ್ದೇನೆ ಅವುಗಳನ್ನು ಸಾಕ್ಷಿ ನೋಡಿ ಒಪ್ಪಿ ದ್ದರಿಂದ ಅವುಗಳನ್ನು ನಿಪಿ- 8 ರಿಂದ 11 ಎಂದು ಗುರುತಿಸಲಾಯಿತು. ನಂತರ ದಿಃ 11-5-2022 ರಂದು ಪೊಲೀಸರು ಲಾರಿಯ ಚಾಲಕನ್ನು ತೋರಿಸಿದರು ಆತನ ಹೆಸರು ಬಾಬುಸಾಬ ಎಲಿಗಾರ ಎಂದು ಹೇಳಿದರು. ಆತನೇ ದಿಃ 8-5-2022 ರಂದು ರಾತಿ4 7-00 ಗಂಟರೆ ಸುಮಾರಿಗೆ ತನ್ನ ಟ್ರಕ ನಂ. ಕೆಎಃ 49ಃ1480 ನಿಲ್ಲಿಸದೇ ಅಪಘಾತಪಡಿಸಿ ಹೋದರು ಎಂದು ತಿಳಿಸಿದರು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿ ಅವನೇ ಆ ದಿನ ಅಪಘಾತಪಡಿಸಿದನು ಎಂದು ತಿಳಿಸಿದರು.

**( ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ ಮಾನ್ಯ ಎಪಿಪಿ ಅವರಿಂದ -**

ನಾನು ಕೊಟ್ಟ ದೂರಿನಲ್ಲಿ ನನ್ನ ತಮ್ಮನು ಸಹ ಅತೀವೇಗವಾಗಿ ತನ್ನ ಹೊಂಡಾ ಶೈನ ಮೋಟಾರ ಸೈಕಲನ್ನು ಬೆಲ್ಲದ ಬಾಗೇವಾಡಿ ಕಡೆಯಿಂದ ಶಿರಢಾನ ಕಡೆಗೆ ರಾತ್ರಿ 7-00 ಗಂಟೆಗೆ ನಿರ್ಲ್ಕತನದಿಂದ ಓಡಿಸಿಕೊಂಡು ಹೋಗುತ್ತಿದ್ದ ಎಂದು ಹಾಗೂ ಆ ಸಮಯದಲ್ಲಿ ಆತನ ಮುಂದೆ ವೇವು ಹೇರಿಕೊಂಡು ಹೊರಟಂತಹ ಒಂದು ಮೋಟಾರ ಸೈಕಲ, ಆತನ ಮೋಟಾರ ಸೈಕಲಗೆ ಹಾಯಿಸಿ ಅಪಘಾತ ಮಾಡಿ ಅದೇ ಸಮಯದಲ್ಲಿ ಆತ ರಸ್ತೆಯಲ್ಲಿ ಬಿದ್ದಿದ್ದು, ಆಗ ಶಿರಢಾನ ಕ್ರಾಸ ಕಡೆಯಿಂದ ಬೆಲ್ಲದ ಬಾಗೇವಾಡಿ ಕಡೆಗೆ ಬಂದಂತಹ ಟ್ರಕ ಬಹಳ ವೇಗವಾಗಿ ರಸ್ತೆ ಕಡೆಗೆ ಗಮನ ಕೊಡದೇ ನಡೆಸಿಕೊಂಡು ಬಂದು ನನ್ನ ತಮ್ಮನ ತಲೆಯ ಮೇಲೆ ಅಪಘಾತ ಮಾಡಿದ್ದಾನೆ ಎಂದು ದೂರಿನಲ್ಲಿ ಬರೆಸಿದ್ದೇ ಎಂದರೆ ಸಾಕ್ಷಿ ನಾನು ಬರೆಸಿರಲಿಲ್ಲ ಎಂದು ಹೇಳುತ್ತಾರೆ.

ಪಾಟೀ ಸವಾಲುಃ

ಆರೋಪಿ ಪರ ವಕೀಲರು ಸಮಯ ಕೇಳಿದ್ದರಿಂದ ನೀಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ